ಬಂಗಾಳಿ ಮೂಲ: ಆಶಾಪೂರ್ಣಾದೇವಿ
ಕನ್ನಡಕ್ಕೆ: ನಾಗಮಣಿ ಎಸ್.ಎನ್.,
ಸರಸಿಜ್ ಆರ್. ಸಿ.

ಕಲೆ: ಡಿ.ಕೆ. ರಮೇಶ್

# ಕೇವಲ ಒಂದು ವಿಳಾಸ



ಅಸಿತ್, ಅವನನ್ನ ಕೆಲವು ದಿನಗಳಿಂದ ನೋಡುತ್ತಿದ್ದಾನೆ. ಒಂದು ಕೊಳೆ ಲುಂಗಿ ಸುತ್ಕೊಂಡಿದ್ದಾನೆ, ಬೆನ್ನೆಲ್ಲ ತೂತು ಬಿದ್ದಿರುವ ಬನಿಯನ್. ಅರೆಬರೆ ನರೆತ ಗಡ್ಡ ಮುಖವನ್ನಾವರಿಸಿದೆ. ತಲೆ ಕೂದಲೂ ಹಾಗೇ, ಮುಳ್ಳು ತಂತಿಯಂತೆ ಎದ್ದು ನಿಂತಿವೆ. ತೂತು ಬಿದ್ದ ಕೆನ್ನೆ ಒಣಗಿಹೋದ ಸೀತಾಫಲದಂತೆ.

ಎಲ್ಲಾ ಸೇರಿ ಅವನನ್ನ ನೋಡಿದರೆ ಜುಗುಪ್ಸೆ ಮೂಡುತ್ತದೆ. ಈ ಅಸಹ್ಯ ಮುಖದವನು ಯಾಕೆ ನಮ್ಮ ಮನೆ ಮುಂದೆ ನಿಂತಿದ್ದಾನೆ ಅಂತ ಅಸಿತ್‌ಗೆ ಅರ್ಥ ಆಗಲಿಲ್ಲ. ಅವನು ಅಲ್ಲಲ್ಲೇ ಠಳಾಯಿಸ್ತಾ ಇರೋದನ್ನ ನೋಡೋಕೆ ಬಹಳ ಇರಸುಮುರಸಾಗುತ್ತಿದೆ.

ಇದೇ ಮೊದಲನೆ ಸಲ ಗಮನಿಸುತ್ತಿರುವವನಂತೆ, “ಏಯ್, ಇಲ್ಲೇನು ಮಾಡ್ತಿದ್ದೀಯ? ಏನ್ ಬೇಕು ನಿನಗೆ?” ಎಂದು ನಿನ್ನೆ ಅವನನ್ನ ಕೇಳಿದ್ದ ಕೂಡ.

ಅದಕ್ಕೆ ಅವನು, “ಏನೂ ಬೇಡ ಬಾಬು, ಒಂದು ವಿಳಾಸ” ಅಂತ ಏನೋ ಗೊಣಗಿದಂತಿತ್ತು.